ದಿನಾಂಕ 05-08-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ.ಕೆ. ವಕೀಲರಿಂದಃ**

ನಾನು 2 ನೇ ತರಗತಿವರೆಗೆ ಓದಿರುತ್ತೇನೆ. ಕನ್ನಡ ಸ್ವಲ್ಪ ಸ್ವಲ್ಪ ಓದುತ್ತೇನೆ. ಪ್ರತಿವಾದಿ ಹಾಗೂ ನಾನು ಒಂದೇ ಊರಿನವರಾಗಿರುವುದರಿಂದ ಬಾಲ್ಯದಿಂದಲೂ ಪರಿಚಯ ಇರುತ್ತಾರೆ. ಶ್ರೀಮತಿ ಮೈಲವ್ವ ಯಮುನಪ್ಪ ಅಣ್ಣೇರ ಎಂದರೆ ನನ್ನ ಸೋದರತ್ತೆ. ಭರಮಪ್ಪ ಮರಡೆಪ್ಪ ಗಾಡಿ ನನ್ನ ಸೋದರತ್ತೆಯ ಗಂಡ. ಸದರಿ ಭರಮಪ್ಪ ಪ್ರತಿವಾದಿಯ ಸಂಬಂಧಿಕರು ಎಂದರೆ ಸರಿ. ಮೈಲವ್ವ ಹಾಗೂ ಭರಮಪ್ಪ ರವರ ವೈವಾಹಿಕ ಜೀವನ ಚೆನ್ನಾಗಿಲ್ಲ ಎಂದರೆ ಸರಿ. ಅವರು ಬೇರೆಯಾಗಿ ವಾಸವಾಗಿರುತ್ತಾರೆ.

2. ದಾವಾ ಚಕ್ಕುಬಂದಿಯನ್ನು 38 ಗುಂಟೆ ಗೆ ಸಂಬಂಧಿಸಿದಂತೆ ತಿಳಿಸಲಾಗಿದೆ. ದಾವಾ ಸ್ವತ್ತಿನ ಚಕ್ಕುಬಂದಿಯಲ್ಲಿ ಪ್ರತಿವಾದಿಯ ತಮ್ಮ ಬೀರಪ್ಪನ ಆಸ್ತಿ ಯಾವ ಕಡೆಗೆ ಬರುತ್ತದೆ ಎಂದರೆ ನನಗೆತಿಳಿದಿಲ್ಲ. ಪ್ರತಿವಾದಿ ನನಗೆ ತಿಳಿಸಿದ ಚಕ್ಕುಬಂದಿಯನ್ನು ನಾನು ನಮೂದು ಮಾಡಿರುತ್ತೇನೆ. ದಾವಾ 38 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ಚಕ್ಕುಬಂದಿ ಹೇಳಬಲ್ಲೆ. ಪೂರ್ವಕ್ಕೆ ಅಜ್ಜಮ್ಮನವರ ಜಮೀನು, ಪಶ್ಚಿಮಕ್ಕೆ ರೇವಣೆಪ್ಪ ಸಾಲಗೇರಿ ರವರ ಜಮೀನು, ಉತ್ತರಕ್ಕೆ ಸಾಲಗೇರಿ ರವರ ಜಮೀನು ಹಾಗೂ ದಕ್ಷಿಣಕ್ಕೆ ಮಂಜುನಾಥ ರವರ ಜಮೀನು ಇರುತ್ತದೆ. ಉತ್ತರಕ್ಕೆ ಪ್ರತಿವಾದಿಯ ಖಾಸ ಸಹೋದರ/ಸಹೋದರಿಯ ಆಸ್ತಿ ಇರುವುದಿಲ್ಲ. ದಾವಾ ಸರ್ವೆ ನಂಬರ್ ಒಟ್ಟು ಆಸ್ತಿ 1 ಎಕರೆ 36 ಗುಂಟೆ ಪೈಕಿ ಯಾವ ಭಾಗದ 38 ಗುಂಟೆ ಎಂದು ಬರೆಸಲಾಗಿದೆ ಎಂದರೆ ಪ್ರತಿವಾದಿಯು ತನ್ನ ಹಿಸ್ಸೆಗೆ ಬಂದಿರುವ 38 ಗುಂಟೆ ಎಂದು ನನಗೆ ತಿಳಿಸಿದ್ದು ಅದರಂತೆ ನಮೂದು ಮಾಡಿರುತ್ತೇನೆ. ಸಾಮೂಹಿಕ ಆಸ್ತಿ ಎಂದು ಬರೆಸಲಾಗಿದೆಯೇ ಎಂದರೆ ಪ್ರತಿವಾದಿಯ ಹಿಸ್ಸೆಗೆ ಬಂದ ಆಸ್ತಿಯನ್ನು ನನಗೆ ನೀಡಿರುತ್ತಾರೆ.

3. ದಾವಾ ಸರ್ವೆ ನಂ.878 ಅ ಆಗಿದ್ದು ಅದರ ಪೂರ್ತಿ ಹಿಸ್ಸಾ ಸಂಖ್ಯೆ ಹೇಳಲಾಗುವುದಿಲ್ಲ. ಸದರಿ ಸರ್ವೆ ನಂಬರ್ ನ ಒಟ್ಟು 1 ಎಕರೆ 36 ಗುಂಟೆಗೆ ಪ್ರತಿವಾದಿ ಏಕೈಕ ಮಾಲೀಕನಲ್ಲ ಎಂದರೆ ಸರಿ. ಪ್ರತಿವಾದಿ ಹಾಗೂ ನಾನು ಒಂದೇ ಓಣಿಯಲ್ಲಿ ವಾಸವಾಗಿದ್ದು ಪರಸ್ಪರ ಸಂಬಂಧಿಕರು ಎಂದರೆ ಸರಿ. ಪ್ರತಿವಾದಿಗೆ ಹೊನ್ನವ್ವ ಎಂಬ ತಾಯಿ ಹಾಗೂ ರೇಣುಕಾ ಎಂಬ ಸಹೋದರಿ, ಬೀರಪ್ಪ ಎಂಬ ಸಹೋದರ ಇರುತ್ತಾರೆ ಎಂದರೆ ಸರಿ. ಸದರಿ ರೇಣುಕಾ ರವಾ

ಗಂಡ ಭರಮಪ್ಪ ಮರಡೆಪ್ಪ ಗಾಡಿ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ರೇಣುಕಾ ರವರು 21 ನೇ ಹೆಂಡತಿ ಆಗಿರುತ್ತಾರೆ ಎಂದು ನುಡಿದಿರುತ್ತಾರೆ. ಅಕ್ಟೋಬರ್ 2009 ರ ವರೆಗೆ ಪ್ರತಿವಾದಿಯ ಕುಟುಂಬದವರ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿ.

4. ದಾವಾ ಸರ್ವೆ ನಂಬರ್ ಮೂಲತಃ ಸರ್ವೆ ನಂ.58 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಪಂಚಾಯತಿ ಬದಲಾವಣೆ ಆಗಿದ್ದು ಆಗ ಸರ್ವೆ ನಂಬರ್ ಬದಲಾಗಿರುತ್ತದೆ ಎಂದರೆ ನಾನು ಖರೀದಿ ಮಾಡಿದಾಗ ದಾವಾ ಸರ್ವೆ ನಂಬರ್ 878 ಆಗಿರುತ್ತದೆ. ಸಾಕ್ಷಿದಾರರಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದ 2016-17 ರ ಆರ್.ಟಿ.ಸಿ ಯನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ ಮೇರೆಗೆ **ನಿಡಿ 1** ಎಂದು ಗುರುತಿಸಲಾಯಿತು. ಸದರಿ ಆರ್.ಟಿ.ಸಿ. ಯಲ್ಲಿ ಅಲ್ಪವಹಿ ಸಂರಕ್ಷಣದಾರರ ಹೆಸರು ನಮೂದಾಗಿದ್ದು ಅದನ್ನು ನಿಪಿ 1 ರ ಕರಾರು ಪತ್ರದಲ್ಲಾಗಲೀ, ವಾದಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

5. ಸಾಕ್ಷಿದಾರರಿಗೆ ದಿನಾಂಕ 17-04-2009 ರ ಹನುಮಂತಪ್ಪ ಬಸಪ್ಪ ಅಜ್ಜಮ್ಮನವರ (ಪೂರ್ವದ ಚಕ್ಕುಬಂದಿ) ರವರ ಖರೀದಿ ಪತ್ರದ ಡಿಜಿಟಲ್ ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ ಮೇರೆಗೆ **ನಿಡಿ 2** ಎಂದು ಗುರುತಿಸಲಾಯಿತು. ಸದರಿ ಖರೀದಿ ಪತ್ರವು ರಿ ಸ ನಂ878/4 ಅ/3 ರ 15 ಗುಂಟೆ ಜಮೀನಿನ ಪೈಕಿ 5 ಗುಂಟೆ ಜಮೀನಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸದರಿ 5 ಗುಂಟೆ ಜಮೀನನ್ನು ರೂ.1,50,000/- ಗಳ ಮೌಲ್ಯಕ್ಕೆ ದಿನಾಂಕ 17-04-2009 ರಲ್ಲಿ ಖರೀದಿಸಲಾಗಿದೆ ಎಂದರೆ ಸರಿ. ನಿಡಿ 2 ರ ಖರೀದಿ ಪತ್ರದ ನಂತರ ನಿಪಿ 1 ರ ಪತ್ರ ಆಗಿದೆ ಎಂದರೆ ಸರಿ.

6. 2009 ರಲ್ಲಿ ಛಾಪಾ ಕಾಗದಗಳನ್ನು ಎಸ್.ಬಿ.ಐ. ಹಾಗು ಎಸ್.ಬಿ.ಎಂ. ಬ್ಯಾಂಕುಗಳಲ್ಲಿ ಮಾತ್ರ ನೀಡಲಾಗುತ್ತಿತ್ತು ಎಂದರೆ ಸರಿ. ರಾಣೇಬೆನ್ನೂರಿನಲ್ಲಿ ಎರಡೂ ಬ್ಯಾಂಕುಗಳು 2009 ರಲ್ಲಿ ಇತ್ತು ಎಂದರೆ ಸರಿ. ನಿಪಿ 1 ರ ಛಾಪಾ ಕಾಗದವನ್ನು ಹರಿಹರದಲ್ಲಿ ಖರೀದಿಸಲಾಗಿದೆ ಎಂದರೆ ಸರಿ. ಛಾಪಾ ಕಾಗದ ಖರೀದಿಸಬೇಕೆಂದರೆ ಮೊದಲಿಗೆ ನಿಗದಿತ ನಮೂನೆಯನ್ನು ಭರ್ತಿ ಮಾಡಿ ಕೊಡಬೇಕಿತ್ತು ಎಂದರೆ ಸರಿ. ನಿಪಿ 1 ರ ಛಾಪಾ ಕಾಗದವನ್ನು ನಾನು ಮತ್ತು 3 ನೇ ಸಾಕ್ಷಿದಾರರಾದ ಹನುಮಂತಪ್ಪ ಖರೀದಿಸಿರುತ್ತೇವೆ. ಹನುಮಂತಪ್ಪ ರವರು ರಾಣೇಬೆನ್ನೂರಿನ ಕುರುಬಗೇರಿಯಲ್ಲಿ ವಾಸವಾಗಿರುತ್ತಾರೆ. 2 ನೇ ಸಾಕ್ಷಿದಾರರಾದ ತಿಪ್ಪಣ್ಣ ನಿಂಗಪ್ಪ ಬರಡಿ ರವರು ಮಾರುತಿನಗರದ ನಿವಾಸಿಯಾಗಿರುತ್ತಾರೆ. 100 ರೂಪಾಯಿ ಮೌಲ್ಯದ ಛಾಪಾ ಕಾಗದ ಖರೀದಿಸಿರುತ್ತೇವೆ.

7. ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳನ್ನು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ 1 ರಲ್ಲಿನ ಪ್ರತಿವಾದಿಯ ಸಹಿ ಹಾಗೂ ಪ್ರತಿವಾದ ಪತ್ರದಲ್ಲಿನ ಸದರಿ ಸಹಿಯ ಮಾದರಿಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಕಳುಹಿಸಬಹುದು, ನನಗೆ ಒಪ್ಪಿಗೆಯಿದೆ. ನಿಪಿ 1ಬಿ ಸಹಿಯನ್ನು ಹೊರತುಪಡಿಸಿ ಬೇರೆ ಸಹಿಗಳನ್ನು ನಾನು ನೋಡಿರುವುದಿಲ್ಲ.

8. ದಿನಾಂಕ 23-10-2022 ರಿಂದ ದಿನಾಂಕ 11-11-2020 ರ ನಡುವಿನಲ್ಲಿ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಡುವಂತೆ ನಾನು ಬರವಣಿಗೆ ಮೂಲಕ ಯಾವುದೇ ಪತ್ರ ನೀಡಿರುವುದಿಲ್ಲ ಖರೀದಿ ಕರಾರು ಪತ್ರದ ಬಾಕಿ ಹಣ ರೂ.50,000/- ಗಳನ್ನು ಹೊಂದಿಸಿಕೊಂಡು ಅನೇಕ ಬಾರಿ ಪ್ರತಿವಾದಿಯನ್ನು ಖರೀದಿ ನೊಂದುಮಾಡಿಕೊಡುವಂತೆ ಕೇಳಿದ್ದು, ಹಾಗೆ ಕೇಳಿದ ದಿನಾಂಕ ಹೇಳಲಾಗುತ್ತದೆಯೇ ಎಂದರೆ ಸುಮಾರು ಸಾರಿ ಕೇಳಿರುತ್ತೇನೆ ಆದರೆ ದಿನಾಂಕ ನೆನಪಿಲ್ಲ. ಸುಮಾರು 10 ಸಾರಿ ಕೇಳಿದ್ದು ಅವರು ನನಗೆ ಸರಿಯಾಗಿ ಸ್ಪಂದಿಸದ ಕಾರಣ 3 ನೇ ಸಾಕ್ಷಿದಾರರಾದ ಹನುಮಂತಪ್ಪ ರವರು ಕೇಳಿರುತ್ತಾರೆ. ಸಾಕ್ಷಿದಾರರು ಮುಂದುವರೆದು ಸುಮಾರು 4-5 ವರ್ಷಗಳಿಂದ ನಾನು ಪ್ರತಿವಾದಿಯನ್ನು ಬೇಟಿ ಮಾಡಿ ಕೇಳಿರುವುದಿಲ್ಲ ಎಂದು ನುಡಿದಿರುತ್ತಾರೆ. 3 ನೇ ಸಾಕ್ಷಿದಾರರು ಹೋಗಿ ಕೇಳಿದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಾಗಲೀ, ವಾದ ಪತ್ರದಲ್ಲಾಗಲೀ ತಿಳಿಸಿರುವುದಿಲ್ಲ

9. ನಿಪಿ 1 ರ ಪತ್ರವನ್ನು ಆರ್.ಬಿ. ಸೊರಟೂರ ವಕೀಲರು ನ್ಯಾಯಾಲಯದ ಆವರಣದಲ್ಲಿ ಸಿದ್ದಪಡಿಸಿರುತ್ತಾರೆ. ಆಗ ನಮ್ಮನ್ನು ಹಾಗೂ ಸಾಕ್ಷಿದಾರರನ್ನು ಹೊರತುಪಡಿಸಿ ಇನ್ನೂ 2-3 ಜನ ಇದ್ದು ಅವರ ಹೆಸರು ನನಗೆ ನೆನಪಿಲ್ಲ. ನೋಟರಿಯನ್ನು ಸಹ ನ್ಯಾಯಾಲಯದ ಆವರಣದಲ್ಲಿ ವಕೀಲರ ಮೂಲಕ ಮಾಡಿಸಲಾಗಿರುತ್ತದೆ. ನನ್ನ ಹಾಗೂ ಪ್ರತಿವಾದಿಯ ಸಹಿಗಳನ್ನು ಗುರುತಿಸಿ ಸಹಿ ಮಾಡಿದವರು ಯಾರು ಎಂದರೆ ಅದರ ಬಗ್ಗೆ ನನಗೆ ತಿಳಿದಿಲ್ಲ. ಸಾಕ್ಷಿದಾರರು ನಿಪಿ 1 ರ ಕರಾರು ಪತ್ರವನ್ನು ನೋಡಿ ನಮ್ಮ ಸಹಿಗಳನ್ನು ಗುರುತಿಸಿ ಯಾರೂ ಸಹಿ ಮಾಡಿರುವುದಿಲ್ಲ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ.

10. ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಮಾರಾಟ ಮಾತುಕತೆ ಆಗಿರುವುದಿಲ್ಲ ಹಾಗೂ ನಿಪಿ 1 ರಂತೆ ಕ್ರಯದ ಕರಾರು ಆಗಿರುವುದಿಲ್ಲ ಎಂದರೆ ಸರಿಯಲ್ಲ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ದಾವೆ

ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.